## ದೂರದಿಂದ ನೋಡುತ್ತಲೇ ಹತ್ತಿರದ್ದನ್ನೂ ತೋರುವುದು

ವಿಡಿಯೊ ದಾಖಲಿಸುವ ಪ್ರಸಂಗವನ್ನು 'ಕಾಮಿಕ್ ರಿಲೀಫ್' ಆಗಿ ಹೆಣೆದಿರುವುದು ನಿರ್ದೇಶಕರ ಜಾಣ್ಮೆ. ತನ್ನ ಕೊನೆಯ ಸಂದೇಶವನ್ನು ವಿಡಿಯೊ ಮೂಲಕ ದಾಖಲಿಸುತ್ತಾ ಸೈಯದ್, ತನ್ನವರಾದ ಪ್ಯಾಲಸ್ತೀನೀಯರಿಂದ ಇಸ್ರೇಲರು ಕಿತ್ತುಕೊಂಡ ಹಕ್ಕಿನ ಬಗೆಗೆ ಕೋಪದ ಮಾತನ್ನಾಡುತ್ತಾನೆ. ಅಲ್ಲಿ ಅವನು ತನ್ನ ಮಾತನ್ನು ದಾಖಲಿಸುವಲ್ಲಿನ ನಾಟಕೀಯತೆಯನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಅದು ಅವನ ಅಂತರಂಗದ ಮಾತೋ, ಆವೇಶಭರಿತನಾಗಿ ಹೇಳುತ್ತಿರುವ ನುಡಿಯೋ, ಯಾರೋ ಒದಗಿಸಿದ ಮಾಹಿತಿಯ ಪುನರುಚ್ಚಾರವೋ ಎಂಬ ಗುಮಾನಿ ನೋಡುಗನಿಗೆ ಬರುತ್ತದೆ.

ಮಾನವ ಬಾಂಬ್‌ಆಗಲು ಸಿದ್ಧಗೊಂಡಿರುವ ಯುವಕರು ವಿಡಿಯೊ ದಾಖಲಿಸುವ ಸಂದರ್ಭದಲ್ಲಿ ಒಮ್ಮೆ ಕ್ಯಾಮೆರಾ ಕೈಕೊಡುತ್ತದೆ. ಇನ್ನೊಮ್ಮೆ ಮನೆಯಿಂದ ಯಾವುದೋ ಕೆಲಸ ಮಾಡುವಂತೆ ಫೋನ್‌ಕರೆ ಬರುತ್ತದೆ. ಈ ಸನ್ನಿವೇಶ ನೋಡಿ ಕ್ಷಣಕಾಲ ನಗು ಬಂದರೂ ತಕ್ಷಣವೇ ಅವರ ಸಂದಿಗ್ಧವನ್ನೂ ಮನಸ್ಸು ಒರೆಗೆ ಹಚ್ಚತೊಡಗುತ್ತದೆ. ಆಪ್ತೇಷ್ಟರೂ ಸೇರಿದಂತೆ ಯಾರಿಗೂ ಗೊತ್ತಾಗದಂತೆ ತಂತಾವೇ ಸ್ಫೋಟಗೊಳ್ಳಲು ಹೊರಟ ಯುವಕರ ಬದುಕಿನ ಈ ಸಣ್ಣ ಪುಟ್ಟ ವಿವರಗಳೇ ಚಿತ್ರ ಸಿನಿಮೀಯ ಆಗದಂತೆಯೂ ನೋಡಿಕೊಂಡಿರುವುದು ಚಿತ್ರಕತೆ ರೂಪಿಸಿರುವುದರಲ್ಲಿನ ಜಾಣ್ಮೆಗೆ ಸಾಕ್ಷಿ.

ಯುವಕರು ವಿಡಿಯೊದಲ್ಲಿ ದಾಖಲಿಸುವ ಮಾತು, ಅವರ ಹಾವ–ಭಾವ ಯಾವುದರಲ್ಲೂ ತತ್ತ್ವಪ್ರಚಾರದ ಉದ್ದೇಶವಿಲ್ಲ. ಅಂತಹ ಸಂದರ್ಭದಲ್ಲಿ ಯುವಕರು ಏನು ಹೇಳುತ್ತಾರೆ ಎನ್ನುವುದರ ವಾಸ್ತವ ದಾಖಲೀಕರಣವಾಗಿ ಹಾಗೂ ಅದನ್ನು ದಾಖಲಿಸಿಕೊಳ್ಳುವಾಗಲೂ ಉದ್ಭವಿಸಬಹುದಾದ 'ಕಾಮಿಕ್ ರಿಲೀಫ್' ಅನ್ನು ಸಹಜ ಎನ್ನುವಂತೆ ಚಿತ್ರ ತೋರಿರುವುದು ಹೆಚ್ಚುಗಾರಿಕೆ.

## ತೀರ್ಪು ಕೊಡದ ಅಂತ್ಯ

ಬಸ್ ನಲ್ಲಿ ಮಾನವ ಬಾಂಬ್ ರೂಪದ ಯುವಕ ಕುಳಿತಿದ್ದಾನೆ. ಅವನ ಮುಖಕ್ಕೆ ಕ್ಲೋಸ್ ಅಪ್. ಶಾಟ್ ಜೂಮ್ ಔಟ್ ಆಗುತ್ತಾ ಹೋಗುತ್ತದೆ. ಇನ್ನೇನು ಅವನು ಸ್ಫೋಟಗೊಳ್ಳುವನೇ, ಏನೆಲ್ಲಾ ಅನಾಹುತಗಳಾಗುವುದೋ, ಆ ಬಸ್ ನಲ್ಲಿ ಯಾರೆಲ್ಲ ಮುಗ್ಧರು ಇರಬಹುದು, ಇವನೆಂಥ ಹುಂಬ ಹೀಗೆ ಹಲವು ಪ್ರಶ್ನೆಗಳನ್ನು ಮನದಲ್ಲಿ ಎಬ್ಬಿಸುವ ಜೂಮ್ ಔಟ್ ಶಾಟ್ ಯಾವುದೇ ತೀರ್ಮಾನ ಕೊಡುವುದಿಲ್ಲ. ಇಡೀ ಪರದೆ ಬೆಳ್ಳಗಾಗಿಬಿಡುತ್ತದೆ. ನಾವು ನುಂಗುವ ಉಗುಳು ಗಂಟಲನ್ನು ನೋಡುವವರಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಿನಿಮಾ ಹೀಗೆಯೇ ಅಲ್ಲವೇ ಕಾಡಬೇಕಿರುವುದು?

ಕಯೀಸ್ ನಷೀಫ್ ಹಾಗು ಅಲಿ ಸುಲಿಮಾನ್ ಚಿತ್ರದ ಪ್ರಮುಖ ಪಾತ್ರಧಾರಿಗಳಾಗಿ ದೀರ್ಘ ಕಾಲ ಕಾಡುವ ಅಭಿನಯ ನೀಡಿದ್ದಾರೆ. ಅಂಟೋನ್ ಹೆಬರ್ಲ್ ಛಾಯಾಗ್ರಹಣ ಔಚಿತ್ಯ ಅರಿತಂತಿದೆ. ಸ್ಯಾಂಡರ್ ವೋನ್ಸ್ ಸಂಕಲನ, ಜಿನಾ ಸುಮೇದಿ ಸಂಗೀತಕ್ಕೂ 90 ನಿಮಿಷಗಳ ಅವಧಿಯ ಚಿತ್ರದಲ್ಲಿ ಸಾಕಷ್ಟು ಅಂಕಗಳು ಸಲ್ಲಬೇಕು.

ನೋಡಿದ ಮೇಲೆ ಪದೇ ಪದೇ ನೋಡುವಂತೆ ಪ್ರೇರೇಪಿಸುವ 'ಪ್ಯಾರಡೈಸ್ ನೌ' ರಾಜಕೀಯ ಕಥನವನ್ನು ಸಿನಿಮಾ ಆಗಿಸುವುದು ಹೇಗೆ ಎಂಬ ಪ್ರಾತ್ಯಕ್ಷಿಕೆಯ ಪ್ರಮುಖ ನಮೂನೆ.